# ಘಟಿಕಾಚಲದಿ ನಿಂತಾ ಹನುಮಂತಾ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** The wordings are as per the book in Ref. 1 (given without highlights). The lyrics in Ref. 2 and that of the singer are matching. There are few differences in comparision to Ref. 1 and these differences are marked in yellow highlights.

ರಾಗ: ನಾದನಾಮಕ್ರಿಯೆ ತಾಳ: ಆದಿ

ಘಟಿಕಾಚಲದಿ ನಿಂತಾ ಶ್ರೀ ಹನುಮಂತಾ ‖ ಪ ‖

ಘಟಿಕಾಚಲದಿ ನಿಂತ ಪಟು ಹನುಮಂತ ತನ್ನ
ಪಠನೆಯ ಮಾಡಲುತ್ಕಟದಿ ಪೊರೆವೆನೆಂದು ‖ ಅಪ ‖

ಚತುರ ಯುಗದಿ ತಾನು ಮುಖ್ಯಪ್ರಾಣ(ನು)
ಚತುರ ಮುಖನಯ್ಯನ
ಚತುರ ಮೂರ್ತಿಗಳನು ಚತುರತನದಿ ಭಜಿಸಿ
(ಚತುರ್ಮುಖ ವಾಣಿ) (ಚತುರ್ಮುಖನಾಗಿ) ಜಗಕೆ ಚತುರ್ವಿಧ ಫಲ ಕೊಡುತ ‖ ೧ ‖

ಸರಸಿಜಭವಗೋಸುಗ ಕರ್ಮಠದೂರ
(ಸರಸಿಜಭವಗೋಸ್ಕರ ಕಲ್ಮಷ ದೂರ)
ವರ ಚಕ್ರತೀರ್ಥ ಸರ
ಮೆರೆವಾ ಚಲದಿ ನಿತ್ಯ ನರಹರಿಗೆದುರಾಗಿ
ಸ್ಥಿರ ಯೋಗಾಸನದಲಿ ಕರೆದು ವರಗಳ ಕೊಡುತ ‖ ೨ ‖

ಶಂಖ ಚಕ್ರವ ಧರಿಸಿ ಭಕ್ತರ ಮನಃ
ಪಂಕವ ಪರಿಹರಿಸಿ
ಪಂಕಜನಾಭ ಶ್ರೀ ಪುರಂದರ ವಿಠಲನ

ಬಿಂಕದ ಸೇವಕ ಸಂಕಟ ಕಳೆಯುತ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಪಠನೆಯ** – ನಾಮ / ಸ್ತೋತ್ರ ಜಪವನ್ನು

**ಉತ್ಕಟದಿ** = ನಿರ್ಧಾರದಿಂದ

**ಚತುರ ಯುಗದಿ** – ನಾಲ್ಕು ಯುಗಗಳಲ್ಲಿ (ಕೃತ, ತ್ರೇತಾ, ದ್ವಾಪರ, ಕಲಿ).

**ಚತುರ ಮುಖನಯ್ಯನ** = ಶ್ರೀ ಹರಿಯ

**ಚತುರ ಮುಖನಯ್ಯನ ಚತುರ ಮೂರುತಿಗಳನು** – ಚತುರ್ಮುಖ ಬ್ರಹ್ಮನ ತಂದೆಯಾದ ನಾರಾಯಣನ ನಾಲ್ಕು ವ್ಯೂಹ ಮೂರ್ತಿಗಳು: ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ.

**ಚತುರ್ಮುಖನಾಗಿ** – ಮುಂಬರುವ ಕಲ್ಪದಲ್ಲಿ ಬ್ರಹ್ಮನಾಗಿ.

**ಚತುರತನದಿ** = ಜ್ಞಾನಪೂರ್ವಕ ಭಕ್ತಿಯಿಂದ

**ಚತುರ್ಮುಖ ವಾಣಿ** = ಬ್ರಹ್ಮನ ವಾಣಿ - ವೇದ

**ಚತುರ್ವಿಧ ಫಲ** = ಧರ್ಮ, ಅರ್ಥ, ಕಾಮ, ಮೋಕ್ಷ

**ಸರಸಿಜಭವಗೋಸುಗ** = ಬ್ರಹ್ಮ ದೇವರ ಸಲುವಾಗಿ (ಇದು ಸ್ಥಳ ಪುರಾಣವಾಗಿರಬಹುದು)

**ಕರ್ಮಠದೂರ** = ಕರ್ಮಾಸಕ್ತಿ ದೂರ

**ಚಕ್ರತೀರ್ಥ ಸರ** = ಅಲ್ಲಿಯ ಸರೋವರದ ಹೆಸರು

**ಚತುರ್ವಿಧ ಫಲ** – ಧರ್ಮ, ಅರ್ಥ, ಕಾಮ, ಮೋಕ್ಷ.

**ಭಕ್ತರ ಮನಃ ಪಂಕವ** – ಮೊರೆಹೊಕ್ಕವರ ಮನಸ್ಸಿನ ಕೊಳೆಗಳನ್ನು.

**ಪಂಕ** = ದೋಷ, ಪಾಪ

**ಬಿಂಕ** = ಅಭಿಮಾನ

**Classification:** Keerthane

**Ankita:** sri purandara vittala

**Location:** Ghatikachala, Near Sholingar, AP

**Category:** hanuma stuti

**Group Words:** hanuma, shankha, chakra, brahma, hampi, padma,

**Pravachana:** NA

**Explanation:** NA